ಶ್ರೀ ಜಿ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂತೆ ಅವಾರ್ಡ್ ಕೊಡುವ ಬಗ್ಗೆ ವಿಚಾರ ಮಾಡುತ್ತೇವೆ. ಇನ್ನು ವಾಹನಗಳನ್ನು ಬೇರೆ ಅಧಿಕಾರಿಗಳು ಉಪಯೋಗಿಸುತ್ತಿದ್ದಾರೆಂದು ಹೇಳಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ. ಈಗಾಗಲೇ ಒಳ ವೈರ್‌ಲೆಸ್ ಸೆಟ್‌ಗಳನ್ನು ಅಪರಿಗೆ ಒದಗಿಸಲಾಗಿದೆ, ಹಂತ ಹಂತವಾಗಿ ಇವುಗಳನ್ನು ಹೆಚ್ಚು ಮಾಡಲಾಗುವುದು.

ಶ್ರೀ ಐ.ಬಿ. ಶಂಕರ್.—ಮಲೆನಾಡಿಗೆ ಒಂದೂ ವೈರ್‌ಲೆಸ್ ಸೆಟ್ ಕೊಟ್ಟಿಲ್ಲ. ಆದ್ದರಿಂದ ಚಿಕ್ಕಮಗಳೂರಿಗೆ ಒಂದು ವೈರ್‌ಲೆಸ್ ಸೆಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಇದಿನಬ್ಬರವರೇ ನಿಮ್ಮ ಪ್ರಶ್ನೆಯನ್ನು ಒಂದು ಪಾರ ಮುಂದಕ್ಕೆ ಹಾಕಿದೆ.

ಜುಕ್ಕಿ ಪ್ರಶ್ನೆ ೯೨ (೩೩೧)

ಶ್ರೀ ಎಂ. ಎಸ್. ಪಾಟೀಲ್.—ನಾನು ಅಂಡರ್‌ಟೇಕಿಂಗ್ಸ್ ಬಗ್ಗೆ ಹೇಳಿದ್ದೇನೆ. ನನಗೆ ಈವರೆಗೂ ಉತ್ತರವೇ ಬಂದಿಲ್ಲ.

ಅಧ್ಯಕ್ಷರು.—ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ಎಲೆಕ್ಟ್ರಿಸಿಟಿಗೆ ಸಂಬಂಧಪಟ್ಟಂತೆ ಎರಡು ಪ್ರಶ್ನೆ ಇದೆ. ಆದರೆ ಮೂಲ ಪ್ರಶ್ನೆ ಲೇಬರ್ ಮಂತ್ರಿಗಳಿಗೆ ಹೋಗ ಬೇಕು. ನನ್ನ ಖಾತೆಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಬೇಕಾದರೆ ಉತ್ತರ ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮಲ್ಲಾರಿಗೌಡ ಎಸ್. ಪಾಟೀಲರೇ, ನಿಮಗೆ ಮುಂದಿನ ಪಾರ ಉತ್ತರ ಕಳುಹಿಸಿಕೊಡಲಾಗುವುದು. ಈಗ ಮುಂದಿನ ಪ್ರಶ್ನೆ ಭೂಪತಿಯವರೇ ಕೇಳಿ.

ರಾಜ್ಯದಲ್ಲಿ ಗ್ರಾಮಗಳ ವಿದ್ಯುದ್ದೀಕರಣ

೯೩. (೩೫೦(ಡಿ) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ೧೯೮೪, ೧೯೮೫ ಮತ್ತು ೧೯೮೬ನೇ ಸಾಲುಗಳಲ್ಲಿ ವಿದ್ಯುದ್ದೀಕರಣಗೊಳಿಸಿದ ಹಳ್ಳಿಗಳ ಸಂಖ್ಯೆಯೆಷ್ಟು? (ವರ್ಷವಾರು ವಿವರ ಕೊಡುವುದು)

ಆ) ಇನ್ನೂ ವಿದ್ಯುತ್ ಸೌಲಭ್ಯವನ್ನು ಹೊಂದದ ಹಳ್ಳಿಗಳ ಮತ್ತು ತಾಂಡಗಳ ಸಂಖ್ಯೆಯೆಷ್ಟು (ತಾಂಡಗಳು–ಹ್ಯಾಮೆಲೆಟ್ಸ್) ಅವುಗಳನ್ನು ಇನ್ನೆಷ್ಟು ವರ್ಷಗಳಲ್ಲಿ ವಿದ್ಯುದ್ದೀಕರಣಗೊಳಿಸಲಾಗುವುದು?

ಇ) ಪ್ರತಿ ಹಳ್ಳಿಗಳಲ್ಲೂ ಜನತಾ ಮನೆಗಳಿರುವ (ಕಾಲೋನಿಗಳಿಗೆ) ಮತ್ತು ಹರಿಜನ ಬಸ್ತಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ? (ಯೋಜನೆಯ ವಿವರ ಗಳನ್ನು ಕೊಡುವುದು)

ಈ) ಸಂಡೂರು ಕ್ಷೇತ್ರದ ಯಾವ ಯಾವ ಹಳ್ಳಿಗಳಿಗೆ ಮತ್ತು ತಾಂಡಾಗಳಿಗೆ (ಹ್ಯಾಮೆಲೆಟ್ಸ್) ೮೪–೮೫ ಮತ್ತು ೮೫–೮೬ರಲ್ಲಿ ವಿದ್ಯುಚ್ಛಕ್ತಿ ಒದಗಿಸಲಾಗಿದೆ ಇನ್ನೂ ವಿದ್ಯುತ್ ಪೂರೈಕೆಯಾಗದೆ ಉಳಿದಿರುವ ಹಳ್ಳಿಗಳು ಮತ್ತು ತಾಂಡಗಳು ಯಾವುವು?

ಉ) ಪ್ರಸ್ತುತ ವರ್ಷ ಯಾವ ಯಾವ ಹಳ್ಳಿಗಳ ಹರಿಜನ ಬಸ್ತಿಗಳಿಗೆ ಮತ್ತು ಜನತಾ ಕಾಲೋನಿಗಳಿಗೆ ವಿದ್ಯುತ್ ಕಂಬಗಳ ವಿಸ್ತರಣೆ ಮಾಡಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೯೮೪–೮೫ರಲ್ಲಿ ೧೪೨೫ ಗ್ರಾಮಗಳು ೧೯೮೫–೮೬ರಲ್ಲಿ ೧೦೩೮ ಗ್ರಾಮಗಳು, ೧೯೮೬–೮೭ರಲ್ಲಿ ೫೬೩ ಗ್ರಾಮಗಳು (೩೧-೧೨-೮೬ರವರೆಗೆ)

ಆ) ೧೫೯೬ ಗ್ರಾಮಗಳು, ೧೯೮೮-೮೯ ಅಂತ್ಯದೊಳಗೆ ವಿದ್ಯುದ್ದೀಕರಣಗೊಳಿಸುವ ಗುರಿಯಿದೆ. ೧೮೩೩೭ ಉಪಗ್ರಾಮಗಳು (ತಾಂಡಾ-ಹ್ಯಾಮೆಲೆಟ್ಸ್) ವಿದ್ಯುದ್ದೀಕರಣಗೊಳಿಸಬೇಕಾಗಿದೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಾಚರಣೆಯನ್ನು ಮುಂದುವರೆಸಿ ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ತೀರ್ಮಾನಿಸಲಾಗುತ್ತದೆ.

ಇ) ಜನತಾ ಮನೆಗಳಿರುವ ಕಾಲೋನಿಗಳ ವಿವರವನ್ನು ಸಂಗ್ರಹಿಸಲಾಗುತ್ತಿದೆ. ವಿದ್ಯುದ್ದೀಕರಣದಿಂದ ಸಂಗ್ರಹಿಸಲಾಗುತ್ತಿದೆ. ವಿದ್ಯುದ್ದೀಕರಣದಿಂದ ಬಿಟ್ಟುಹೋದ ಹರಿಜನ ಬಸ್ತಿಗಳ ವಿದ್ಯುದ್ದೀಕರಣಗಳಿಗೆ ಪ್ರತ್ಯೇಕ ಯೋಜನೆಗಳನ್ನು ತಯಾರಿಸಿ ನವದೆಹಲಿಯಲ್ಲಿನ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಆರ್ಥಿಕ ನೆರವು ಪಡೆದು ಕಾರ್ಯಾಂತರಗೊಳಿಸಲಾಗುತ್ತಿದೆ.

ಈ) ಪಟ್ಟಿ ಲಗತ್ತಿಸಿದೆ.

ಉ) ಸಂಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಪ್ರತ್ಯೇಕ ಯೋಜನೆಯನ್ನು ತಯಾರಿಸಿ ಗ್ರಾಮೀಣ ವಿದ್ಯುದ್ದೀಕರಣ ನಿಗಮದ ನೆರವನ್ನು ಪಡೆದು ಕಾರ್ಯಾಂತರಗೊಳಿಸಲಾಗುತ್ತಿದೆ.

ಅನುಬಂಧ-೧

೧೯೮೪-೮೫, ೧೯೮೬-೮೫, ೧೯೮೫-೮೬ ರಲ್ಲಿ ವಿದ್ಯುಚ್ಛಕ್ತಿ ಒದಗಿಸಿದ ಹಳ್ಳಿಗಳು, ಉಪಗ್ರಾಮಗಳು.

೧೯೮೪-೮೫

ಹಳ್ಳಿಗಳು

೧) ಮರುತಾಲ ೨) ದೇವಗಿರಿ

ಉಪಗ್ರಾಮಗಳು

೧) ಶ್ರೀ ರಾಮಶೆಟ್ಟಿ ಹಳ್ಳಿ

೧೯೮೫-೮೬

ಹಳ್ಳಿಗಳು

೧) ನರಸಿಂಗಾಪುರ	೨) ರಾಣೆಜಿತಪುರ
೩) ವಿಠಲನಗರ	೪) ಜೈಸಿಂಗಪುರ
೫) ಸಿದ್ದಾಪುರ	೬) ತುಮತಿ
೭) ರಾಮಸಾಗರ	೮) ಹುಲಿಕುಂಟ
೯) ಜೋಡಿಕಸಿನಾಯಕನಹಟ್ಟಿ	೧೦) ಶ್ರೀರಾಹಾಸಾಪುರ
೧೧) ಶೆಲಿಯಪ್ಪನಹಳ್ಳಿ	

ಉಪಗ್ರಾಮ

೧) ಗೊಲ್ಲರಹಟ್ಟಿ

೧೯೮೬-೮೭

ಹಳ್ಳಿಗಳು

೧) ಎಮ್ಮಿಹಟ್ಟಿ
೨) ಕನಕಾಪುರ

ಉಪಗ್ರಾಮಗಳು

೧) ತೋಕೇನಹಳ್ಳಿ ತಾಂಡ
೨) ವೆಂಕಟಗಿರಿತಾಂಡ
೩) ತುಮತಿತಾಂಡ

ಅನುಬಂಧ-೨

ವಿದ್ಯುದ್ದೀಕರಣ ಮಾಗಬೇಕಾದ ತಾಂಡಾಗಳು (ಹ್ಯಾಮ್ಲೆಟ್‌ಗಳು)

೧) ಸುಬ್ಬರಾಯನ ಹಳ್ಳಿ	೨) ಭಾಗಾಪುರ
೩) ವೆಂಕಟಗಿರಿತಾಂಡ	೪) ಕೊರಚಹಳ್ಳಿ
೫) ತುಮಟಿತಾಂಡ	೬) ನಾಗೇಹಳ್ಳಿ
೭) ಪಾದಾಪುರ	೮) ಹಳೇಬಡ್ಡಿನಕಟ್ಟಿ
೯) ಹೊಸಬಡ್ಡಿನಕಟ್ಟಿ	೧೦) ನಲ್ಲಬಂಡಿ
೧೧) ಜಿ. ಗೊಲ್ಲರಹಳ್ಳಿ	೧೨) ಸಿ. ಗೊಲ್ಲರಹಳ್ಳಿ
೧೩) ಸಣ್ಣಉಪ್ಪಾರಹಳ್ಳಿ	೧೪) ಉಂಚಿನಹಳ್ಳಿ
೧೫) ಹಳೇಜೋಗೀಕಲ್ಲು	೧೬) ಹೊಸಜೋಗಿ ಕಲ್ಲು
೧೭) ಕಪತಾಳೆ	೧೮) ಉತ್ತರಮಲೈ
೧೯) ಗಿರೇನಹಳ್ಳಿ	೨೦) ದೊಡ್ಡಉಪ್ಪಾರಹಳ್ಳಿ
೨೧) ಸ್ವಾಮಿಹಳ್ಳಿ	೨೨) ತೋರನಹಳ್ಳಿ
೨೩) ಹೊಸೂರು	೨೪) ತುಂಬರಗುಡ್ಡೆಸೈಡ್ ಕ್ಯಾಂಪ್

ಶ್ರೀ ಯು. ಭೂಪತಿ.—ಸ್ವಾಮಿ ಕಳೆದಸಾರಿಯ ಅಧಿವೇಶನದಲ್ಲಿ ನಾನು ಇದೇ ರೀತಿಯ ಪ್ರಶ್ನೆ ಕೇಳಿದ್ದೆ. ಆಗ ಮಂತ್ರಿಗಳು ನನಗೆ ಆಶ್ವಾಸನೆ ಕೊಟ್ಟಿದ್ದರು. ಸಂಡೂರು ಕ್ಷೇತ್ರದಲ್ಲಿ ಒಂದೂವರೆ ವರ್ಷದಲ್ಲಿ ಎಲ್ಲಾಹಳ್ಳಿಗಳನ್ನೂ ವಿದ್ಯುದೀಕರಣಗೊಳಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಕಾರ್ಯಗತ ಗೊಳಿಸುವುದಕ್ಕೆ ಏತಕ್ಕೆ ಆಗಲಿಲ್ಲ ? ಆದಾದನಂತರ ಜನತಾ ಮನೆಗಳಿರುವ ಕಾಲೋನಿಗಳಿಗೆ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಹೇಳುತ್ತಿದ್ದೀರಿ. ಜನತಾ ಮನೆಗಳನ್ನು ಎಲ್ಲಾ ಹಳ್ಳಿಗಳಲ್ಲೂ ಹೊಸದಾಗಿ ಕಟ್ಟಿರುವುದು ತಮಗೆ ಗೊತ್ತಿದೆ, ಇದೇನೂ ಹೊಸದಾಗಿ ನಾನು ಹೇಳಿಲ್ಲ, ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ತಮಗೆ ಗೊತ್ತಿರುವಹಾಗೆ ಹ್ಯಾಮ್ಲೆಟ್ಸ್‌ಗಳಿಗೆ ಪ್ರತ್ಯೇಕವಾದ ಸ್ಕೀಮ್ ಇದೆ, ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮ್ ಇದೆ.ಅದನ್ನು ಯಾವರೀತಿ ಸೆಂಟ್ರಲ್ ಗೌರ್ನಮೆಂಟ್‌ಗೆ ಕಳುಹಿಸಿ ಅಪ್ರೂವಲ್ ತರಿಸಿಕೊಂಡು ಮಾಡಬೇಕೆಂದು ಹೇಳುತ್ತಿರೋ ಅದೇ ರೀತಿ ಏನಾದರೂ ಸ್ಕೀಮ್ ಇದಕ್ಕೆ ಇದೆಯೇ ? ಒನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಾಚರಣೆ ಮುಂದುವರಿಸಿ, ಒನೇ ಪಂಚವಾರ್ಷಿಕ ಯೋಜನೆಯಲ್ಲಿ ತೀರ್ಮಾನಿಸಲಾಗುತ್ತದೆ ಎಂದು ಹೇಳಿದ್ದೀರಿ. ಈ ಉಪಗ್ರಾಮಗಳ ಬಗ್ಗೆ ಈ ರೀತಿ ಹೇಳಿದ್ದೀರಿ. ಇವುಗಳನ್ನು ಯಾವಾಗ ಮಾಡುತ್ತೀರಿ. ಪಂಚವಾರ್ಷಿಕ ಯೋಜನೆಗಳು ಆಗಿಹೋಗುತ್ತಿವೆ, ಇದನ್ನು ಯಾವಾಗ ಮಾಡುತ್ತೀರಿ ಎಷ್ಟು ವರ್ಷದಲ್ಲಿ ಮಾಡುತ್ತೀರಿ ಎಂಬುದನ್ನು ನಾನು ಸ್ಪೆಸಿಫಿಕ್ ಆಗಿ ಕೇಳುತ್ತಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಒಂದೂವರೆ ವರ್ಷದೊಳಗೆ ಸಂಡೂರಿನಲ್ಲಿರುವ ಎಲ್ಲಾ ಹಳ್ಳಿಗಳಿಗೂ ವಿದ್ಯುದೀಕರಣ ಮಾಡುತ್ತೇನೆ ಎಂದು ಹೇಳಿದ್ದು ನನಗೆ ನೆನಪಿಲ್ಲ. ಆದರೂ ಇಡೀ ರಾಜ್ಯದಲ್ಲಿ ನಮ್ಮ ಯೋಜನೆ ಏನಿದೆ ಎಂದರೆ ೧೯೮೫-೮೯ ರ ಒಳಗಾಗಿ ಒಂದೇ ಒಂದು ಗ್ರಾಮವನ್ನೂ ಬಿಡದೆ ವಿದ್ಯುದೀಕರಣ ಮಾಡುತೇವೆ ಎಂದು ಹೇಳಿದ್ದೇನೆ. ಜನತಾ ಕಾಲೋನಿಗಳ ಬಗ್ಗೆ ಏನಾಗಿದೆ ಎಂದರೆ, ಜನತಾ ಕಾಲೋನಿಗಳ ಪಟ್ಟಿ ಕೆ. ಇ. ಬಿ. ಗೆ ಬಂದಿರುವುದಿಲ್ಲ. ಇದು ಬಿ. ಡಿ. ಓ. ಹತ್ತಿರ ಇರುತ್ತದೆ. ಹೊಸ ಸ್ಕೀಮ್‌ನಲ್ಲಿ ಕಟ್ಟಿರತಕ್ಕ ಕಾಲೋನಿಗಳು ಏನಿರುತ್ತವೆ ಅವುಗಳ ಪಟ್ಟಿ ಬಿ. ಡಿ. ಓ. ಅವರಿಂದ ಕೆ. ಇ. ಬಿ. ಗೆ ಎಲ್ಲಿಯವರೆಗೆ ಹೋಗಿರುವುದಿಲ್ಲ. ಅದು ಹೋಗದೇ ಇದ್ದರೆ ಪಾಹಿತಿ ಅವರ ಹತ್ತಿರ ಇರುವುದಿಲ್ಲ. ಅಂಥಾದ್ದು ಯಾವುದಾದರೂ ಸ್ಪೆಸಿಫಿಕ್ ಆಗಿ ಇದ್ದರೆ, ಸಂಬಂಧಪಟ್ಟ ಬಿ. ಡಿ. ಓ. ಅವರಿಗೆ ಬರೆದು ತರಿಸಿಕೊಳ್ಳುತ್ತೇನೆ. ಇನ್ನು ೧೯೮೪-೮೫ ಮತ್ತು ೧೯೮೬-೮೭ ರಲ್ಲಿ ಒಟ್ಟು ಎಷ್ಟು ಗ್ರಾಮಗಳಿಗೆ ವಿದ್ಯುದೀಕರಣ ಆಗಿದೆ ಎಂಬ ಗ್ರಾಮಗಳ ಪಟ್ಟಿಯನ್ನು ಅವರಿಗೆ ಕೊಟ್ಟಿದ್ದೇನೆ. ೨೪ ಗ್ರಾಮಗಳಿಗೆ ವಿದ್ಯುದೀಕರಣ ಆಗಿದೆ, ಇದರಲ್ಲಿ ಉಪಗ್ರಾಮಗಳೂ ಸೇರಿವೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಕೆಲವು ಕಡೆ ತಾಂಡಾಗಳು ರೆವಿನ್ಯೂ ವಿಲೇಜಸ್ ಗಿಂತ ದೊಡ್ಡದಾಗಿರುವುದು ತಮಗೆ ಗೊತ್ತಿರಬಹುದು ಎಂದುಕೊಳ್ಳುತ್ತೇನೆ. ಅಂತಹ ಹಳ್ಳಿಗಳಿಗೆ, ತಾಂಡಾಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡುವಾಗ, ಸ್ಪೆಸಿಫಿಕ್ ರೂಲ್ಸ್ ಏನಾದರೂ ಪಾಲೋ ಮಾಡುತ್ತಿದ್ದೀರಾ ? ಆರ್. ಇ. ಎಸ್. ತರಹ. ಅದನ್ನು ಬಿಟ್ಟು ಏನಾದರೂ ಸ್ಪೆಸಿಫಿಕ್ ರೂಲ್ಸ್ ಮಾಡುವುದಕ್ಕೆ ಸಾಧ್ಯ ಇದೆಯೇ ? ಸ್ಪೆಸಿಫಿಕ್ ಪ್ರಾವಿಜನ್ಸ್ ಮಾಡುವುದಕ್ಕೆ ಸಾಧ್ಯ ಇದೆಯೇ, ಎಲ್ಲಿ ಹ್ಯಾಮ್ಲೆಟ್‌ಗಳು ರೆವಿನೂ ವಿಲೇಜಸ್‌ಗಿಂತ ದೊಡ್ಡದಾಗಿದೆಯೋ ಆಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯ ಇದೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಸ್ಪೆಷಲ್ ಪ್ರೊಗ್ರಾಂ ಫಾರ್ ಅಗ್ರಿಕಲ್ಚರ್, ಸ್ಪೆಷಲ್ ಪ್ರೊಗ್ರಾಂ ಫಾರ್ ಇಂಡಸ್ಟ್ರಿ ಎಂದು ಇದೆ. ಆರ್. ಇ. ಸಿ. ಸ್ಕೀಮ್ ಎಂದು ಮಾಡುತ್ತೇವೆ. ಇಷ್ಟು ಮೇನ್ ವಿಲೇಜಸ್, ಇಷ್ಟು ಹ್ಯಾಮ್ಲೆಟ್ಸ್ ಎಂದು ಒಂದೊಂದು ಸ್ಕೀಮ್‌ನಲ್ಲಿ ೧೫೦-೨೦೦ ಗ್ರಾಮಗಳನ್ನು ಮೆನ್‌ಷನ್ ಮಾಡಿ ಕಳುಹಿಸಿ ಕೊಡುತ್ತೇವೆ. ಸಂಪೂರ್ಣ ಇದರಲ್ಲಿ ಸೇರಿದೆಯೋ ಇಲ್ಲವೇ ನೋಡುತ್ತೇನೆ, ಇಲ್ಲಿಯವರೆಗೆ ಕಳುಹಿಸಿದೆ ಇದ್ದರೆ ಈಗ ಕಳುಹಿಸುತ್ತೇನೆ.

ರೈತರುಗಳಿಗೆ ಅರಣ್ಯ ಜಮೀನನ್ನು ಸಕ್ರಮಗೊಳಿಸುವುದು

೯೪ (೩೬೫) ಶ್ರೀ ಎಂ. ಶಿವಣ್ಣ (ಹೆಚ್. ಡಿ. ಕೋಟೆ).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ :—

ಅ) ೧೯೭೮ರಿಂದ ಈಚೆಗೆ ಅರಣ್ಯ ಪ್ರದೇಶದಲ್ಲಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ರೈತರಿಗೆ ಖಾಯಂ ಗೊಳಿಸಲು ಸರಕಾರದವರು ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಯಾವ ರೀತಿ ಮತ್ತು ಯಾವಾಗ ಮಾಡಲಾಗುವುದು ?

ಶ್ರೀ ಜೆ. ಎಸ್. ದೇಶಪಾಂಡೆ.— (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ ಸಮಿತಿಯನ್ನು ನೇಮಕ ಮಾಡಿರುವ ಬಗ್ಗೆ ಯಾವುದೇ ಆದೇಶ ಸರ್ಕಾರದಿಂದ ಇದುವರೆವಿಗೂ ಯಾವುದೇ ಶಾಸಕರಿಗೆ ಆಗಲಿ ಅಥವಾ ಯಾವುದೇ ತಹಶೀಲ್ದಾರರಿಗೆ ಆಗಲಿ ಬಂದಿಲ್ಲ. ಆಮೇಲೆ ತಾವು ಒಂದು ಗಡಿಯನ್ನು ಹಾಕಿದ್ದೀರಿ. ಅದೇನೆಂದರೆ ೧೯೭೮ರಿಂದ ಹಿಂದೆ ಯಾರು ಯಾರು ಬಗರ್ ಹುಕ್ಕುಂ ಮಾಡಿ ಕೊಂಡಿದ್ದರೋ ಅಂತಹವರ ಜಮೀನು ಗಳನ್ನು ಮಾತ್ರ ಸಕ್ರಮಗೊಳಿಸಬೇಕೆಂದು ಹೇಳಿದ್ದೀರಿ. ಯಾವ ಆಧಾರದ ಮೇಲೆ ಸಕ್ರಮಗೊಳಿಸ ಬೇಕೆನ್ನುವ ನಿಯಮವನ್ನು ಏನಾದರೂ ತಿಳಿಸಿದ್ದೀರಾ ? ಅಥವಾ ಜರಿಜನಲ್ ರೆಕಾರ್ಡ್ ಇರಬೇಕೆ ? ಅಥವಾ ಅನುಭವ ಇದ್ದರೆ ಸಾಕೇ ದಯವಿಟ್ಟು ತಿಳಿಸಿ ?

ಶ್ರೀ ಜೆ. ಎಸ್. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ ನಾನು ಮೊದಲೇ ಹೇಳಿದ ಹಾಗೆ ೧೯೭೮ನೇ ಇಸವಿಗಿಂತ ಹಿಂದೆ ಯಾರು ಯಾರು ಅತಿಕ್ರಮ ಮಾಡಿಕೊಂಡಿದ್ದರೋ ಅಂತಹವರ ಜಮೀನುಗಳನ್ನು ಸಕ್ರಮಗೊಳಿಸಬೇಕೆಂದು ತಿಳಿಸಲಾಗಿದೆ. ಹಂದನಂತರ ಅತಿಕ್ರಮ ಮಾಡಿರುವಂತಹ ಜಮೀನುಗಳನ್ನು ಸಕ್ರಮಗೊಳಿಸುವುದಕ್ಕೆ ಬರುವುದಿಲ್ಲ. ಕಾರಣವೆ ನೆಂದರೆ ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ ಇದುವರೆವಿಗೂ ನಮಗೆ ಯಾವುದೇ ಆದೇಶ ಬಂದಿಲ್ಲ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಸಚಿವರಲ್ಲಿ ಒಂದು ಸ್ಪಷ್ಟೀಕರಣವನ್ನು ಪ್ರಸ್ತಾಪ ಮಾಡುವುದೇನೆಂದರೆ ಅತಿಕ್ರಮವಾಗಿರತಕ್ಕಂಥ ಜಮೀನುಗಳನ್ನು ಸಕ್ರಮ ಗೊಳಿಸುವುದಕ್ಕೆ ಇದುವರೆವಿಗೂ ಸಮಿತಿಗಳನ್ನು ಮಾಡಿಲ್ಲ. ಈ ವಿಷಯ ಶಾಸಕರಿಗೆ ಯಾರಿಗೂ ಗೊತ್ತಿಲ್ಲ. ತಾಲ್ಲೂಕು ತಹಶೀಲ್ದಾರರವರಿಗೆ ಗೊತ್ತಿಲ್ಲ.....